ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು

2106 (2485); ಶ್ರೀ ನಿಂಗಯ್ಯ ಬಿ.ಬಿ (ಮೂಡಿಗೆರೆ)

ಅ) ಮೂಡಿಗೆರೆ ತಾಲ್ಲೂಕು ವ್ಯಾಪ್ತಿಯ ತತ್ಕೊಳ, ಕುಂದೂರು, ತಳವಾರ ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಹಿಪ್ಲಾ–ಮಾಡ್ಲಾ ಮಸಗಲಿ ಇನ್ನಿತರೆ ಅರಣ್ಯ ಪ್ರದೇಶದಲ್ಲಿ ಕೃಷಿ ಮಾಡಿಕೊಂಡಿದ್ದ ಎಷ್ಟು ರೈತ ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿದೆ;

ಆ) ಹಾಗಿದ್ದಲ್ಲಿ, ಎಲ್ಲಾ ನಿರಾಶ್ರಿತರ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯಗಳನ್ನು ಒದಗಿಸಲಾಗಿದೆಯೇ;

ಇ) ಈ ನಿರಾಶ್ರಿತರಿಗೆ ಮೂಡಿಗೆರೆ ತಾಲ್ಲೂಕಿನ ಅಥವಾ ಕ್ಷೇತ್ರದ ಯಾವ ಯಾವ ಗ್ರಾಮದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ;

ಈ) ಇನ್ನೂ ಬಹಳಷ್ಟು ಕುಟುಂಬಗಳಿಗೆ ಪರಿಹಾರವಾಗಿ ಬದಲಿ ಭೂಮಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಿರುವ ಕುನ್ನಹಳ್ಳಿ, ಮರೆಬೈಲು, ಬೆವಂಬೈಲು, ಉಗ್ಗೆಹಳ್ಳಿ, ಬಾನಹಳ್ಳಿ, ಫಲ್ಗುಣಿ ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಹಾಂದಿಯಲ್ಲಿ (ಹಿಪ್ಲಾ–ಮಾಡ್ಲಾ) ನಿರ್ಮಾಣವಾಗಿರುವ ಭದ್ರಾ ನಗರ ಈ ಪ್ರದೇಶಗಳಿಗೆ ಪೂರ್ಣವಾಗಿ ಮೂಲಭೂತ ನಾಗರೀಕ ಸೌಲಭ್ಯ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ, ಸರ್ಕಾರ ಭೂಮಿ ಕಳೆದುಕೊಂಡಿರುವ ನಿರಾಶ್ರಿತರಿಗೆ ಪರಿಹಾರ ಮತ್ತು ಪುನರ್ವಸತಿಗಳನ್ನು ಕಲ್ಪಿಸಿಕೊಡಲು ತಕ್ಷಣ ಕ್ರಮಕ್ಕೈಗೊಳ್ಳುವುದೇ?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಚಿಕ್ಕಮಗಳೂರು ವಿಭಾಗದ ಮೂಡಿಗೆರೆ ತಾಲ್ಲೂಕು ವ್ಯಾಪ್ತಿಯ, ತತ್ಕೊಳ, ಕುಂದೂರು, ತಳವಾರ ಗ್ರಾಮದ 322 (1122.21 ಎಕರೆ) ರೈತ ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿದೆ.

ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು ವಿಭಾಗ ವ್ಯಾಪ್ತಿಗೆ ಒಳಪಡುವ ಹಿಪ್ಲಾ–ಮಾಡ್ಲಾ ಗ್ರಾಮಗಳಿಂದ ಒಟ್ಟು 292 ಕುಟುಂಬಗಳನ್ನು ಭದ್ರಾ ಅಭಯಾರಣ್ಯದ ಹೊರಗೆ ಪುನರ್ವಸತಿ ಕಲ್ಪಿಸಲಾಗಿರುತ್ತದೆ.

ಆ) ಹೌದು.

ಇ) ಮೂಡಿಗೆರೆ ತಾಲ್ಲೂಕಿನ ಕುನ್ನಹಳ್ಳಿ, ಮರಬೈಲು, ಉಗ್ಗೆಹಳ್ಳಿ, ಬಾನಹಳ್ಳಿ, ಫಲ್ಗುಣಿ, ಜಿ. ಅಗ್ರಹಾರ ಗ್ರಾಮಗಳಲ್ಲಿ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅನುಬಂಧ–1 & 2 ರಲ್ಲಿ ವಿವರಿಸಿದೆ.

ಭದ್ರಾ ಹುಲಿ ಸಂರಕ್ಷಿತ, ವ್ಯಾಪ್ತಿಗೊಳಪಡುವ ಹಿಪ್ಲಾ ಮತ್ತು ಮಾಡ್ಲ ಗ್ರಾಮಗಳ ಸಂತ್ರಸ್ಥರಿಗೆ ಚಿಕ್ಕಮಗಳೂರು ತಾಲ್ಲೂಕಿನ ಕೆಳಗೂರು–ಹಾಂದಿ ಮತ್ತು ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿಯಲ್ಲಿ ಪುನರ್ವಸತಿ ಕಲ್ಪಿಸಲಾಗಿರುತ್ತದೆ.

ಈ) ಬಂದಿರುವುದಿಲ್ಲ.

ಉ) ಚಿಕ್ಕಮಗಳೂರು ತಾಲ್ಲೂಕಿನ ಕೆಳಗೂರು–ಹಾಂದಿ ಗ್ರಾಮದ ಪುನರ್ವಸತಿ ಪ್ರದೇಶದಲ್ಲಿ ದೇವಸ್ಥಾನ ನಿರ್ಮಾಣ, ರಸ್ತೆ ನಿರ್ಮಾಣ, ಶಾಪಿಂಗ್ ಕಾಂಪ್ಲೆಕ್ಸ್, ಕಮ್ಯುನಿಟಿ ಹಾಲ್ ನಿರ್ಮಾಣ ಇತರೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ₹. 44.40 ಲಕ್ಷಗಳಿಗೆ ಜಿಲ್ಲಾಧಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಊ) ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.